<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 109/2016 P.W.1**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **06.03.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

<u>ಆದೇಶ ದಿನಾಂಕ **06.01.2026** ರಂತೆ ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **MG** ವಕೀಲರಿಂದ :</u>

ನನ್ನನ್ನು ಮಹಾವೀರ ಅಪಾರ್ಟಮೆಂಟ್ ನ ಮಾಲೀಕರ ಅಸೋಸಿಯೇಷನ್ ನಿಂದ ನೇಮಕ ಮಾಡಿಕೊಂಡಿದ್ದರು. ಪಯನೀರ್ ಸೆಕ್ಯೂರಿಟಿ ಏಜೆನ್ಸಿ ಬಗ್ಗೆ ಗೊತ್ತು. ಮೊದಲು ನಾನು ಪಯನೀರ್ ಸೆಕ್ಯೂರಿಟಿ ಏಜೆನ್ಸಿ ಯಲ್ಲಿ ಕೆಲಸ ಮಾಡುತ್ತಿದ್ದೆ. ಪಯನೀರ್ ಸೆಕ್ಯೂರಿಟಿ ಏಜೆನ್ಸಿ ಯಲ್ಲಿ ನಾನು ಕೆಲಸ ಮಾಡುತ್ತಿದ್ದ ಬಗ್ಗೆ ನನ್ನ ಬಳಿ ದಾಖಲೆಗಳು ಇರಲಿಲ್ಲ. ಮಹಾವೀರ ಅಪಾರ್ಟಮೆಂಟ್ ನಲ್ಲಿ 8 ಫ್ಲೋರ್ ಗಳು ಇದೆ. ಸದರಿ ಘಟನೆ 5 ನೇ ಅಂತಸ್ಥಿನಲ್ಲಿ ನಡೆದಿದೆ. ಒಂದು ಅಂತಸ್ಥಿನಲ್ಲಿ 11 ಅಪಾರ್ಟಮೆಂಟ್ ಗಳು ಇವೆ. ಅದೇ ರೀತಿ 5 ನೇ ಅಂತಸ್ಥಿನಲ್ಲಿ ಕೂಡ 11 ಅಪಾರ್ಟಮೆಂಟ್ ಗಳು ಇವೆ. ಲ್ಯಾಪ್ ಟಾಪ್ ಚಾರ್ಜರ್ ಶವದ ಪಕ್ಕದಲ್ಲಿ ಇತ್ತು. ಕುತ್ತಿಗೆಯಲ್ಲಿ ಇರಲಿಲ್ಲ. ನಾನು ಶವ ಇದ್ದ ಕೊಠಡಿಯಲ್ಲಿ ಕಬ್ಬಿಣದ ಚೇರ್ (ಮು.ಮಾ. 3) ಅನ್ನು ಅಲ್ಲಿ ನೋಡಿದ್ದೇನೋ ಇಲ್ಲವೋ ನೆನಪಿಲ್ಲ. ಮಹಾವೀರ ಅಪಾರ್ಟಮೆಂಟ್ ನಲ್ಲಿ ಒಳಗೆ ಮತ್ತು ಹೊರಗೆ ಬೇರೆ ಬೇರೆ ಗೇಟ್ ಗಳು ಇವೆ. ಎರಡು ಗೇಟ್ ಗಳ ನಡುವೆ 200 ಮೀಟರ್ ಅಂತ ಇದೆ. ಒಳಗೆ ಬರುವ ಗೇಟ್ (Entry Gate) ಬಳಿ ವಿಸಿಟರ್ಸ ವಹಿ (Visitors Register) ಇರುತ್ತದೆ. ನಾನು ಆ ದಿನ ಸೆಕ್ಯೂರಿ ಗೇಟ್ ನಲ್ಲಿ ಇರಲಿಲ್ಲ ಆಗಾಗಿ ನಾನು ಆರೋಪಿ ಬಂದು ಸಹಿ ಮಾಡಿದ್ದನ್ನು ನೋಡಿಲ್ಲ. ಅಪಾರ್ಟಮೆಂಟ್ ಒಳಗೆ ಹೋಗಿದ್ದನ್ನೂ ನೋಡಿಲ್ಲ. ಮೃತಳು ಬಂದು ಆರೋಪಿಯನ್ನು ಕರೆದುಕೊಂಡು ಹೋಗಿದ್ದನು ನಾನು ಕ್ಯಾಮಾರದಲ್ಲಿ ನೋಡಿರುತ್ತೇನೆ. ಮೃತಳು ಆರೋಪಿಯನ್ನು ವಾಪಸ್ಸು ಕರೆದುಕೊಂಡು ಬಂದು ಕಳುಹಿಸಿಕೊಟ್ಟಳು ಎಂದರೆ ನಾನು ನೋಡಿಲ್ಲ. ನಾನು ಕ್ಯಾಮಾರದಲ್ಲಿ ಬಿಟ್ಟು ಆ ದಿನ ಮೃತಳು ಮತ್ತು ಆರೋಪಿಯನ್ನು ನೋಡಿಲ್ಲ. ನಾನು ಮಹಾವೀರ ಅಪಾರ್ಟಮೆಂಟ್ ಕೆಲಸ ಮಾಡುತ್ತಿರಲಿಲ್ಲ ಮತ್ತು ಪೊಲೀಸರು ನನ್ನನ್ನು

ಕರೆದುಕೊಂಡು ಬಂದು ಸುಳ್ಳು ಸಾಕ್ಷಿ ಮಾಡಿಸಿರುತ್ತಾರೆ ಎಂದರೆ ಸರಿ ಅಲ್ಲ. ಗೋಪಾಲ್, ರಂಜೀತ್, ಅನುಪ್ ರವರುಗಳು ಮಹಾವೀರ ಅಪಾರ್ಟಮೆಂಟ್ ನಲ್ಲಿ 2015 – 2016 ರಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ ಅಲ್ಲ. ಅವರುಗಳು ಸಹ ಮೊದಲು ಏಜೆನ್ಸಿಯಿಂದ ಬಂದು ನಂತರ ಮ್ಯಾನೇಜ್ ಮೆಂಟ್ ನಿಂದ ನೇಮಕಾತಿ ಹೊಂದಿದ್ದರು. ಒಳಗಡೆ ಬಂದವರು ವಾಪಸ್ಸು ಹೋಗುವ ಕಾಲಕ್ಕೆ ಹೊರಗೆ ಹೋಗುವ ಗೇಟ್ ನಲ್ಲಿ ಯಾವುದೇ ವಹಿಯಲ್ಲಿ ನಮೂದು ಮಾಡಲು ಸಾಧ್ಯವಿಲ್ಲ. CCTV ಕ್ಯಾಮಾರ ದೃಶ್ಯವಳಿಯಲ್ಲಿ ನಾನು ಆರೋಪಿಯನ್ನು ನೋಡಿಲ್ಲ ಎಂದರೆ ಸರಿ ಅಲ್ಲ. ಆತ ಒಳಗೆ ಬಂದಾಗ ಇದ್ದ ಕ್ಯಾಮಾರದಲ್ಲಿ ನೋಡಿದ್ದೇನೆ. ನಾನು ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.